ಹುಳಿಮಾಡಿ ತಂದರೆ ಅದು ರುಚಿಯಾಗಿರುತ್ತೆ ಏನೇ ಆದರೂ ಮೈಸೂರಿನಲ್ಲಿ ಪ್ರತಿಭೆಗೆ ಕಡಿಮೆ ಇಲ್ಲ. ಮೈಸೂರಿನವರಿಗೆ ಆದ್ಯತೆ ಕೊಡಿ.

Sri A. R. BADARINARAYANA.— I, as the Education Minister, do not like to appropriate the powers which I do not have. We are only a recommendatory body. We can say, these are the feelings of the Mysoreans. We can convey the feelings to the Central Government or to the Board of Management. We can say that the members of this House strongly feel that Kannadigas should have a due share in the staff. That idea would be conveyed.

Sri H. S. SIDDAPPA.— I request the hon. Minister humbly to protect the interests of the Kannadigas.

Sri A. R. BADARINARAYANA.— I would protect the interests as much as Shri Siddappa would like to.

Sri H. T. KRISHNAPPA.— Is it your earnest desire to do so?

MADAM SPEAKER.— I cannot understand this sort of questioning.

re-Disturbance of Law and order in Bangalore.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಈ ರಾಜ್ಯದಲ್ಲಿ ಸಾರ್ವಜನಿಕ ಆಸ್ತಿಗೆ ಪ್ರಾಣಕ್ಕೆ ಬಹಳ ಅಪಾಯವಾಗಿದೆ. ಬೆಂಗಳೂರು ನಗರದಲ್ಲಿ ಜನತೆ ಸರ್ಕಾರದ ಬಗ್ಗೆ ಹುಚ್ಚೆದ್ದಿದ್ದಾರೆ.

ಅಧ್ಯಕ್ಷರು : ನೋಟೀಸ್ ಕಳುಹಿಸಿದ್ದೀರಾ?

ಶ್ರೀ ಬಿ. ಪುಟ್ಟಸ್ವಾಮಯ್ಯ.— ನಮ್ಮ ನಾಯಕರು ಕಾರ್ಯದರ್ಶಿಯವರಿಗೆ ಫೋನ್ ಮಾಡಿದರು. ನಮ್ಮ ಪ್ರಾಣ ಹೋಗುವಾಗ ಯಾವ ನೋಟೀಸ್ ಕಳುಹಿಸುವುದು? ಬರೆಯುವುದಕ್ಕೆ ಕೈ ಬರುವುದಿಲ್ಲ. ಅಸೆಂಬ್ಲಿ ಮೆಂಬರ್ ಹೋಗುತ್ತಿದ್ದಾನೆ ಹಿಡಿದುಕೊಳ್ಳಿರೋ ಎಂದು ಜನ ಬರುತ್ತಾರೆ. ಮುಖ್ಯಮಂತ್ರಿಗಳ ರಕ್ಷಣೆಗೆ ಹೋಗುತ್ತಿದ್ದ ಪೋಲೀಸ್ ಜೀಪು ಪುಡಿಪುಡಿಯಾಗಿದೆ. ಅನೇಕ ಆಸ್ತಿಪಾಸ್ತಿಗಳನ್ನು ಜನರು ಸುಟ್ಟುಹಾಕಿದ್ದಾರೆ. ಜನಗಳು ರೊಚ್ಚಿಗೆದ್ದಿದ್ದಾರೆ. ನಮ್ಮ ಪ್ರಾಣಗಳು ಉಳಿಯಬೇಕಾದರೆ, ಈ ದೇಶದ ಜನ ಸುಮ್ಮನೆ ಇರಬೇಕಾದರೆ ಯಾವುದಾದರೂ ಒಂದು ಕಟ್ಟುನಿಟ್ಟಾದಂಥ ಉತ್ತರ ಸರ್ಕಾರದಿಂದ ಜನತೆಗೆ ಬೇಕು. ವಿರೋಧ ಪಕ್ಷದವರಿಗೆ ಒಂದು ಯೂನಿಫಾರಂ ಸೆಟ್ ಕೊಡಿಸಿ ನಾವು ಹಾಕಿಕೊಂಡು ಬರುತ್ತೇವೆ. ಇಲ್ಲದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ಬಾವುಟ ಇದ್ದ ಗಾಡಿ ಕಥೆ ಏನಾಗಿದೆ ನೋಡಿ

ವೈ. ಎಸ್. ಪಾಟೀಲರು ಮತ್ತು ಬಾಪೂಗೌಡರು ಏಟು ತಿಂದಿದ್ದಾರೆ. ಹನುಮೇ ಗೌಡರು ಕಾರ್ಯದರ್ಶಿಯವರಿಗೆ ಫೋನ್ ಮಾಡಿದ್ದಾರೆ. ಅಸೆಂಬ್ಲಿಗೆ ಬರಬೇಕಾದರೆ ಬಂದೋಬಸ್ತ ಗಾಡಿ ಕಳಿಸಿ ಎಂದು. ಈ ಪರಿಸ್ಥಿತಿ ರಾಜ್ಯದಲ್ಲಿದೆ. ಏನು ಕಾರಣ ವೆಂದು ನಮ್ಮ ಹಾಸ್ಟೆಲ್‌ಒಳಗೆ ಕೆಲವರನ್ನು ಕೂಗಿ ಕೇಳಿದೆವು. ಅನ್ನ ಇಲ್ಲದೆ ಸಾಯುವ ಬದಲು, ಹೋರಾಡಿ ಸಾಯುತ್ತೇವೆ ಎಂದು ಹೇಳುತ್ತಾರೆ. ಕಟ್ಟುನಿಟ್ಟಾದ ಉತ್ತರ ಬೇಕು. ಮುಖ್ಯಮಂತ್ರಿಗಳ ಹಿಂದೆ ಬರುತ್ತಿದ್ದ ಪೋಲೀಸ್ ಜೀಪು ಪುಡಿಪುಡಿಯಾಗಿದೆ. ಬಸ್‌ಗಳನ್ನು ಸುಟ್ಟಿದ್ದಾರೆ. ಜನಗಳು ನಿರ್ಭಯವಾಗಿ ಓಡಾಡುವ ಪರಿಸ್ಥಿತಿ ಇಲ್ಲ. ಇದರ ಬಗ್ಗೆ ಸರ್ಕಾರದ ಕಟ್ಟುನಿಟ್ಟಾದ ಉತ್ತರ ಬೇಕು; ಪ್ರಾಣ ಹೋಗುವಂಥ ಸಮಯದಲ್ಲಿ ನೋಟೀಸ್ ಕೇಳಬೇಡಿ.

Re. Police excess on students in Hassan.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಸದನ ಪ್ರಾರಂಭವಾ ದಾಗಿನಿಂದಲೂ, ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತಲೇ ಇದ್ದೇನೆ. ಹಾಸನ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರ ದೌರ್ಜನ್ಯ ನಡೆಯಿತು. ಅದರ ಬಗ್ಗೆ ದೂರ ಕೊಟ್ಟಾಗ ನ್ಯಾಯಾಂಗ ವಿಚಾರಣೆ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟರು. ವಿಚಾರಣಾ ಆಯೋಗಕ್ಕೆ ಸತ್ತವನ ಬಗ್ಗೆ ವಿಚಾರಣೆ ಮಾಡಿ ಎಂದು ಆದೇಶ ಕೊಟ್ಟಿದ್ದಾರೆ ವಿದ್ಯಾರ್ಥಿಗಳ ಬಗ್ಗೆ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಸೇರಿಸಿಲ್ಲ.

(ಮೂರು–ನಾಲ್ಕು ಸದಸ್ಯರು ಎದ್ದು ಮಾತನಾಡುತ್ತಿದ್ದರು)

ಶ್ರೀ ಡಿ. ಕೆ. ನಾಯ್ಕರ್.— ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಒಂದು ವಿನಂತಿ ಮಾಡುತ್ತೇನೆ. ಒಬ್ಬರು ಮಾತನಾಡಲಿ ೩-೪ ಜನ ರೂಲ್ಸ್ ಬಿಟ್ಟು ಮಾತ ನಾಡುತ್ತಾರೆ. ಇದು ವರೆಗೆ ನಿಯಮ ಪಾಲಿಸಿಕೊಂಡು ಬಂದಂಥ ಮಾನ್ಯ ಸದಸ್ಯರು ೩-೪ ಜನ ಏಕೆ ಮಾತನಾಡಬೇಕು? ಒಬ್ಬೊಬ್ಬರೇ ನಿಂತು ದಯವಿಟ್ಟು ಮಾತನಾಡ ಬೇಕು.

ಶ್ರೀ ಜೆ. ಎಲ್. ಕಬಾಡಿ.— ನಿಮ್ಮ ಒಪ್ಪಿಗೆ ಹೇಳಿ, ನಿಮ್ಮ ಪಾರ್ಟಿಯವರನ್ನು ಕಂಟ್ರೋಲ್ ಮಾಡಿ.

ಶ್ರೀ ಡಿ. ಕೆ. ನಾಯ್ಕರ್.— ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಂಡೆ. ಅದನ್ನು ಕೂಡ ಅವರು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಾಸನದ ಘಟನೆ ಬಗ್ಗೆ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ ದಿವಸ ಅದನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸಿದೆವು. ಆದರೆ ಅದರ ಟರ್ಮ್ಸ್ ಆಫ್ ರೆಫರೆನ್ಸ್ ನೋಡಿದರೆ ನಮಗೆ ಕಾಣುತ್ತಾ ಇರತಕ್ಕಂಥಾದ್ದು ರಾಜು ಎಂಬ ಹುಡುಗ ಸಂಶಯಾಸ್ಪದಕವಾದ ರೀತಿಯಲ್ಲಿ ಏನು ಮರಣಹೊಂದಿ